

# ಕ್ರಿಕೆಟ್ ದಿಗ್ಗಜರ ಒಡನಾಡಿ
# ಕುಮಟಾ ರಘು

■ ಗಿರೀಶ ದೊಡ್ಡಮನಿ

ಕಳೆದ ಹದಿಮೂರು ವರ್ಷಗಳಲ್ಲಿ ಭಾರತ ಕ್ರಿಕೆಟ್ ತಂಡಕ್ಕೆ ಹಲವು ಆಟಗಾರರು ಬಂದರು, ಬೆಳಗಿದರು ಹಾಗೂ ಮಿಂಚಿ ಮರೆಯಾದರು. ಅದರಲ್ಲಿಯೇ ಕೆಲವರು ತಂಡದ ನಾಯಕರೂ ಆದರು, ದಂತಕಥೆಗಳಾಗಿ ಇತಿಹಾಸದ ಪುಟದಲ್ಲಿ ಉಳಿದರು. ದೇಶ, ವಿದೇಶದ ಪಿಚ್‌ಗಳಲ್ಲಿ ಸಿಕ್ಸರ್, ಬೌಂಡರಿಗಳ ರಾಶಿ ಪೇರಿಸಿದವರು ರನ್ ಹೊಳೆ ಹರಿಸಿದವರು ಹಲವರು. ಈ ನಡುವೆ ಕೆಲವು ಖ್ಯಾತನಾಮರು ಮುಖ್ಯ ತರಬೇತುದಾರರಾಗಿಯೂ ಗಮನ ಸೆಳೆದರು.

ಆದರೆ ಈ ಅವಧಿಯಲ್ಲಿ ಭಾರತ ತಂಡದಲ್ಲಿ ಬದಲಾಗದೇ ಉಳಿದ ಏಕೈಕ ವ್ಯಕ್ತಿ ಎಂದರೆ ರಾಘವೇಂದ್ರ ದಿವಗಿ. ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್ ಅವರು ಆಡುವ ಕಾಲದಲ್ಲಿ ಭಾರತ ತಂಡಕ್ಕೆ ಕಾಲಿಟ್ಟ ಉತ್ತರ ಕನ್ನಡ ಜಿಲ್ಲೆಯ ಕುಮಟಾದ 'ರಘು' ಈಗಿನ ನಾಯಕ ಶುಭಮನ್ ಗಿಲ್, ಅಭಿಷೇಕ್ ಶರ್ಮಾ, ಯಶಸ್ವಿ ಜೈಸ್ವಾಲ್, ತಿಲಕ್ ವರ್ಮಾ ಅವರಿಗೂ ಅಚ್ಚುಮೆಚ್ಚಿನವರು. ಥ್ರೋಡೌನ್ ಪರಿಣತರಾಗಿ (ಸೌಟಿನಂತಹ ಸಾಧನದ ಮೂಲಕ ನೆಟ್ಸ್‌ನಲ್ಲಿ ಬ್ಯಾಟರ್‌ಗಳಿಗೆ ಬೇರೆ ಬೇರೆ ವೇಗದಲ್ಲಿ ಚೆಂಡು ಎಸೆಯುವ ನಿಪುಣ) ಆಟಗಾರರ ಬ್ಯಾಟಿಂಗ್ ಕೌಶಲವನ್ನು ಸಾಣೆ ಹಿಡಿದವರು.

ದೊಡ್ಡ ದೊಡ್ಡ ಕ್ರಿಕೆಟಿಗರೊಂದಿಗೆ ಒಡನಾಟವಿದ್ದರೂ ರಘು ಪ್ರಚಾರದ ಹಿಂದೆ ಹೋದವರೂ ಅಲ್ಲ. ಮಾಧ್ಯಮ ಪ್ರತಿನಿಧಿಗಳಿಗೂ 'ಹಲೋ...', 'ನಮಸ್ಕಾರ'ದೊಂದಿಗೆ ಒಂದು ಕಿರುನಗೆಯ ಬೀರಿ ಮರೆಯಾಗುವ ಸಂಕೋಚದ ವ್ಯಕ್ತಿ. ಆದರೆ ಇತ್ತೀಚೆಗೆ ಏಷ್ಯಾ ಕಪ್ ಟೂರ್ನಿಯ ಸಂದರ್ಭದಲ್ಲಿ ಭಾರತ ತಂಡದ 'ಜೆನ್ ಝಿ' ಹುಡುಗರು ಒಂದು ಹೆಜ್ಜೆ ಮುಂದೆ ಹೋದರು. ರಾಘವೇಂದ್ರನನ್ನು ಡ್ರೆಸಿಂಗ್ ಕೋಣೆಯಲ್ಲಿ ಕ್ಯಾಮೆರಾ ಮುಂದೆ ನಿಲ್ಲಿಸಿಯೇ ಬಿಟ್ಟರು. ಪ್ರತಿ ಪಂದ್ಯದ ನಂತರ ಡ್ರೆಸಿಂಗ್ ರೂಮ್‌ನಲ್ಲಿ ಆ ದಿನ ಉತ್ತಮವಾಗಿ ಆಡಿದ ಒಬ್ಬ ಆಟಗಾರನಿಗೆ 'ಇಂಪ್ಯಾಕ್ಟ್ ಪ್ಲೇಯರ್' ಪದಕ ನೀಡುವ ಪರಿಪಾಟ ಇದೆ. ಏಷ್ಯಾ ಕಪ್ ಸೂಪರ್ ಫೋರ್ ಸುತ್ತಿನಲ್ಲಿ ಪಾಕಿಸ್ತಾನ ಎದುರು ಗೆದ್ದ ನಂತರ ತಿಲಕ್ ವರ್ಮಾ ಅವರಿಗೆ ಪದಕ ನೀಡಲು ರಘು ಅವರನ್ನು ಆಯ್ಕೆ ಮಾಡಿದರು. ಈ ಸಂದರ್ಭದಲ್ಲಿ ಪದಕ ಪ್ರದಾನ ಮಾಡುವವರು ಒಂದು 'ಮೋಟಿವೇಷನಲ್ ಲೆಕ್ಚರ್' ಕೊಡುವುದು ರೂಢಿ. ಆಗ ರಘು ನೀಡಿದ ಆ ಚುಟುಕು ಭಾಷಣ ಈಗ ಸಾಮಾಜಿಕ ಜಾಲತಾಣದಲ್ಲಿ ಭಾರಿ ಜನಪ್ರಿಯತೆ ಗಳಿಸಿದೆ.

'ರಾಮ್...ರಾಮ್... ಪ್ರತಿಭೆಯು ದೈವದತ್ತವಾದುದು, ಅದಕ್ಕೆ ವಿನೀತರಾಗಿರಿ. ಪ್ರಸಿದ್ಧಿ ಜನರು ಕೊಟ್ಟಿದ್ದು ಅದಕ್ಕೆ ಕೃತಜ್ಞರಾಗಿರಿ. ಏಕಾಗ್ರತೆ ಸ್ವಯಾರ್ಜಿತ, ಎಚ್ಚರಿಕೆಯಿಂದ ಕಾಪಾಡಿಕೊಳ್ಳಿ. ಪ್ರೇರಣೆ ತಾತ್ಕಾಲಿಕ, ಶಿಸ್ತು ಶಾಶ್ವತ. ಈ ಆಟದಲ್ಲಿ ಯಾರೂ ಪರಿಪೂರ್ಣರಲ್ಲ. ಕಲಿಯುತ್ತ ಮುಂದೆ ಸಾಗಬೇಕು. ಎಲ್ಲ ಸಾಧನೆಗಳೂ ದೇವರನ್ನು ತಲುಪುತ್ತವೆ. ದೇವರು ಶ್ರೇಷ್ಠ. ಯಶಸ್ಸಿಗೆ ಮಿತಿ ಇಲ್ಲ. ವೈಫಲ್ಯವೇ ಅಂತಿಮವಲ್ಲ...' ಎಂದು ಇಂಗ್ಲಿಷ್‌ನಲ್ಲಿ ರಘು ಮಾಡಿದ್ದ ಭಾಷಣ ಅಲ್ಲಿದ್ದ ಹಿರಿ, ಕಿರಿಯ ಆಟಗಾರರ ಮನಗೆದ್ದಿತ್ತು.